http : //www.sjmcascchitradurga.edu.in
email : sjmascta@rediffmail.com
ಎಸ್.ಜೆ.ಎಂ.ವಿದ್ಯಾಪೀಠ (ರಿ.) ಚಿತ್ರದುರ್ಗ
☎ ಕಛೇರಿ : 08194-222506

ಶ್ರೀ ಜಗದ್ಗುರು ಮುರುಘರಾಜೇಂದ್ರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಚಂದ್ರವಳ್ಳಿ, ಚಿತ್ರದುರ್ಗ - 577 501. ಪೋಸ್ಟ್ ಬಾಕ್ಸ್ ನಂ. 88
ನ್ಯಾಕ್ ಪುನರ್ಮಾನ್ಯತೆ : 'ಎ' ಗ್ರೇಡ್ ಸಿ.ಜಿ.ಪಿ.ಎ. 3.05

SRI JAGADGURU MURUGHARAJENDRA COLLEGE OF ARTS, SCIENCE & COMMERCE
Chandravalli, CHITRADURGA - 577 501. Post Box No. 88, Karnataka
NAAC Reaccredited with 'A' Grade CGPA 3.05

ಕ್ರಮಾಂಕ : ಎಸ್.ಜೆ.ಎಂ.ಸಿ. / / 20 -20 ದಿನಾಂಕ : ..........................

# Seat Earmarked for Reserved Category

| Programme | SC 15% | ST 3% | OBC32% | Total Reserved | GM | Grand Total |
|---|---|---|---|---|---|---|
| B.A | 54 | 11 | 115 | 180 | 180 | 360 |
| B.Sc | 13 | 03 | 29 | 45 | 45 | 90 |
| B.Com | 18 | 04 | 38 | 60 | 60 | 120 |
| Total | 85 | 18 | 182 | 285 | 285 | 570 |

CO-ORDINATOR
IQAC
SJM College of Arts, Scince & Commerce
Chandravalli, Chitradurga.

PRINCIPAL
Sri Jagadguru Murugharajendra College
of Arts, Science & Commerce
CHITRADURGA

S.J.M. COLLEGE CHITRADURGA Chandravalli

ಕರ್ನಾಟಕ ಸರ್ಕಾರ

ಸಂಖ್ಯೆ ಕಾಶಿಇ: 209:ಶೈವಿ:ಪ್ರವೇಶ: 2002-03

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-1, ದಿನಾಂಕ: 09-01-2003

## ಸುತ್ತೋಲೆ

ವಿಷಯ:- ಕರ್ನಾಟಕ ರಾಜ್ಯದ ಪದವಿ ಕಾಲೇಜುಗಳಲ್ಲಿ ಪ್ರಥಮ ಪದವಿ ತರಗತಿಗಳ ಪ್ರವೇಶದಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಬಗ್ಗೆ.

---0---

ಪದವಿ ಕಾಲೇಜುಗಳಲ್ಲಿ ಪ್ರಥಮ ವರ್ಷದ ತರಗತಿಗಳಿಗೆ ಪ್ರವೇಶದಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಸದುದ್ದೇಶದಿಂದ ಈ ಕಳಕಂಡ ಮಾರ್ಗಸೂಚಿಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ಸುಪ್ರೀಮ್ ಕೋರ್ಟಿನ ತೀರ್ಪಿನ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ. ಇದನ್ನು 2003-2004ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ವರ್ಷದ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವಾಗ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನಿತ ಅಲ್ಪಸಂಖ್ಯಾತ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

1. ತಮ್ಮ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆಯನ್ನು ಸೂಚನಾಫಲಕದ ಮೇಲೆ / ವೆಬ್‌ಸೈಟ್‌ನಲ್ಲಿ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು ಪ್ರಕಟಿಸಬೇಕು. ಈ ಪ್ರವೇಶ ಸಂಖ್ಯೆಯನ್ನು ಸಂಯೋಜನೆವಾರು ರೋಸ್ಟರ್ ಪದ್ಧತಿ ಪ್ರಕಾರ ಪ್ರಕಟಿಸಬೇಕು. ಪ್ರತಿ ಸಂಯೋಜನೆಯಲ್ಲಿ ಎಷ್ಟು ವರ್ಗಗಳು (Sections) ಇರುತ್ತವೆ ಎಂಬುದನ್ನು ನಮೂದಿಸಬೇಕು. ಈ ರೀತಿಯಲ್ಲಿ ಪ್ರಕಟಿಸಿರುವ ಸಂಯೋಜನೆಗಳಿಗೆ / ವರ್ಗಗಳಿಗೆ ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆದಿರಬೇಕು. ಆಯಾ ವಿಶ್ವವಿದ್ಯಾನಿಲಯ ನಿಗದಿ ಪಡಿಸಿದ ಪ್ರಕಾರ ವಿದ್ಯಾರ್ಥಿಗಳನ್ನು ಮಾತ್ರ ದಾಖಲಾತಿ ಮಾಡಿಕೊಳ್ಳಬೇಕು. ಸೂಚನಾಫಲಕದ ಮೇಲೆ ಪ್ರಕಟಿಸಬಹುದಾದ ಮಾಹಿತಿಗೆ ಒಂದು ಉದಾಹರಣೆ ಕೊಡಲಾಗಿದೆ.

ಉದಾ:- ಖಾಸಗಿ ಅನುದಾನಿತ ಕಾಲೇಜು

| | | | |
|---|---|---|---|
| ಕಾಲೇಜಿನಲ್ಲಿ ಲಭ್ಯವಿರುವ ಒಟ್ಟು ಪ್ರವೇಶಗಳು - | | - | 600 |
| ವಿಭಾಗವಾರು/ಸಂಯೋಜನೆವಾರು ಲಭ್ಯವಿರುವ ಪ್ರವೇಶಗಳು - | ವಿಜ್ಞಾನ ವಿಭಾಗ | - | 200 |
| | ವಾಣಿಜ್ಯ ವಿಭಾಗ | - | 100 |
| | ಕಲಾ ವಿಭಾಗ | - | 300 |

ವಿಭಾಗವಾರು ಲಭ್ಯವಿರುವ ಪ್ರವೇಶಗಳು

| | ಶೇಕಡ | ಬಿ.ಎಸ್ಸಿ | ಬಿ.ಕಾಂ | ಬಿ.ಎ. |
|---|---|---|---|---|
| ಶಿಕ್ಷಣ ಸಂಸ್ಥೆಗೆ ಬಿಡಲಾದ ಪ್ರವೇಶಗಳ ಸಂಖ್ಯೆ: | 20 | 40 | 20 | 60 |
| ಮೆರಿಟ್ ಆಧಾರದ ಮೇಲೆ ಹಂಚಿಕೆಯಾಗುವ ಒಟ್ಟು ಪ್ರವೇಶಗಳ ಸಂಖ್ಯೆ | 80 | 160 | 80 | 240 |

| | ಮೀಸಲಾತಿ ಪ್ರಮಾಣ | ಲಭ್ಯವಿರುವ ಒಟ್ಟು ಪ್ರವೇಶಗಳ ಸಂಖ್ಯೆ | | |
|---|---|---|---|---|
| | ಶೇಕಡ | ಬಿ.ಎಸ್ಸಿ | ಬಿ.ಕಾಂ | ಬಿ.ಎ. |
| | 100% | 200 | 100 | 300 |
| ಪ್ರವರ್ಗ: | | | | |
| ಸಾಮಾನ್ಯ ವರ್ಗ - | 50 | 100 | 50 | 150 |
| ಪರಿಶಿಷ್ಟ ಜಾತಿ - | 15 | 30 | 15 | 45 |
| ಪರಿಶಿಷ್ಟ ಪಂಗಡ - | 03 | 06 | 03 | 09 |
| ವರ್ಗ - 1 - | 04 | 08 | 04 | 12 |
| ವರ್ಗ - 2ಎ - | 15 | 30 | 15 | 45 |
| ವರ್ಗ - 2ಬಿ - | 04 | 08 | 04 | 12 |
| ವರ್ಗ - 3ಎ - | 04 | 08 | 04 | 12 |
| ವರ್ಗ - 3ಬಿ - | 05 | 10 | 05 | 15 |

1. ಕಾಲೇಜಿನಲ್ಲಿ ಬೋಧನೆ ಮಾಡುವ ಸಂಯೋಜನೆಗಳು ಹಾಗೂ ಪ್ರತಿ ಸಂಯೋಜನೆಯಲ್ಲಿರುವ ವಿಷಯಗಳು ವಿಶ್ವವಿದ್ಯಾನಿಲಯ ನಿಗಧಿಪಡಿಸಿರುವ ಪಠ್ಯಕ್ರಮದಲ್ಲಿರುವ ಸಂಯೋಜನೆಗಳ ಗುಂಪಿನಲ್ಲಿರಬೇಕು. ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಸರ್ಕಾರಿ ಪದವಿ ಕಾಲೇಜಿನಲ್ಲಿ ಹೊಸದಾಗಿ ವಿಷಯವನ್ನಾಗಲಿ ಅಥವಾ ಸಂಯೋಜನೆಯನ್ನಾಗಲಿ ಪ್ರಾರಂಭಿಸಬಾರದು ಹಾಗೂ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಬಾರದು. ಇಲಾಖೆಯ ಲಿಖಿತ ಪೂರ್ವಾನುಮತಿ ಇಲ್ಲದೇ ಕಾಲೇಜಿನ ಹೆಚ್ಚುವರಿ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡುವ ದೃಷ್ಟಿಯಿಂದ ಮಾಧ್ಯಮವಾರು (Medium wise) ತರಗತಿಗಳನ್ನು ಪ್ರಾರಂಭಿಸಬಾರದು.
2. ಪ್ರಥಮ ಪದವಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಆಯಾ ವಿಶ್ವವಿದ್ಯಾನಿಲಯಗಳ ವೇಳಾಪಟ್ಟಿಯನ್ನು ಅನುಸರಿಸಬೇಕು. ದಾಖಲಾತಿಯ ಪೂರ್ಣ ವೇಳಾಪಟ್ಟಿಯನ್ನು (Calendar of events for admission) ಕಾಲೇಜಿನಲ್ಲಿ ಪ್ರಮುಖವಾದ ಸ್ಥಳದಲ್ಲಿ ಪೋಷಕರ/ವಿದ್ಯಾರ್ಥಿಗಳ ಗಮನಕ್ಕಾಗಿ ಕಡ್ಡಾಯವಾಗಿ ಪ್ರಕಟಿಸಬೇಕು.

1. ಪಿ ಯು ಸಿ ಪರೀಕ್ಷಾ ಫಲಿತಾಂಶ ಪ್ರಕಟವಾದ ಮಾರನೇ ದಿವಸದಿಂದ ಕನಿಷ್ಠ ಐದು ದಿನಗಳ ಕಾಲ ಪ್ರವೇಶ ಅರ್ಜಿಗಳು ವಿದ್ಯಾರ್ಥಿಗಳಿಗೆ ದೊರಕುವಂತೆ ಏರ್ಪಾಡು ಮಾಡಬೇಕು. (ಅರ್ಜಿಗಳಿಗೆ ಕ್ರಮ ಸಂಖ್ಯೆಯಿರಬೇಕು) ಪ್ರತಿ ದಿವಸ ಕನಿಷ್ಠ ನಾಲ್ಕು ಗಂಟೆಗಳ ಕಾಲ ಪ್ರವೇಶ ಅರ್ಜಿಗಳು ದೊರಕಲು ವ್ಯವಸ್ಥೆ ಮಾಡಬೇಕು. ಯಾವ ಸಮಯದಲ್ಲಿ ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ಕೊಡಲಾಗುವುದು ಎಂಬುದನ್ನು ಪೂರ್ವಭಾವಿಯಾಗಿ ಸೂಚನಾಫಲಕ/ಕಪ್ಪು ಹಲಗೆಯ ಮೇಲೆ ಪ್ರಕಟಿಸಬೇಕು. ಅವಶ್ಯಕತೆ ಕಂಡುಬಂದಲ್ಲಿ ಹೆಚ್ಚಿನ ಕೌಂಟರ್ಸ್ ತೆಗೆದು ಅರ್ಜಿಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ದೊರಕುವಂತೆ ಏರ್ಪಾಡು ಮಾಡಬೇಕು.

2. ಪ್ರವೇಶ ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ವೇಳಾಪಟ್ಟಿಯಂತೆ ಕೊನೆಯ ದಿನಾಂಕವಾದ ನಂತರ ಮೂರು ದಿವಸಗಳ ಸಮಯವನ್ನು ವಿದ್ಯಾರ್ಥಿಗಳಿಂದ ಭರ್ತಿ ಮಾಡಿದ ಅರ್ಜಿಗಳನ್ನು ಹಿಂದಕ್ಕೆ ಪಡೆಯಲು ಕೊನೆಯ ದಿನಾಂಕದೊಳಗಾಗಿ ಕೊಡಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ವಿದ್ಯಾರ್ಥಿಗಳಿಂದ ಪಡೆಯಲು ಪ್ರತ್ಯೇಕ ಕೌಂಟರ್ಸ್ ತೆಗೆಯಬೇಕು. ಪ್ರತಿದಿವಸ ಕನಿಷ್ಠ ನಾಲ್ಕು ಗಂಟೆಗಳ ಸಮಯ ಈ ಕೌಂಟರ್ಸ್ ತೆಗೆದಿರಬೇಕು. ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಪ್ರಾರಂಭ ಮಾಡಿದ ಮಾರನೆಯ ದಿವಸದಿಂದ ಭರ್ತಿ ಮಾಡಿದ ಅರ್ಜಿಗಳನ್ನು ವಿದ್ಯಾರ್ಥಿಗಳಿಂದ ಹಿಂದಕ್ಕೆ ಪಡೆಯಬಹುದು.

3. ಪ್ರತಿ ದಿವಸ ಎಷ್ಟು ಅರ್ಜಿಗಳನ್ನು ಮಾರಾಟ ಮಾಡಲಾಯಿತು ಎಂಬುದಕ್ಕೆ ಲೆಕ್ಕ ಇಡಬೇಕು. ಅರ್ಜಿಗಳನ್ನು ವಿದ್ಯಾರ್ಥಿಗಳಿಗೆ ಕೊಡುವಾಗಲೇ ಗಣಕೀಕರಣ ಮಾಡಿಕೊಂಡಲ್ಲಿ ಮುಂದೆ ಅವಶ್ಯವಾದ ಮಾಹಿತಿಯನ್ನು ಸೇರಿಸಲು ಸುಲಭವಾಗುತ್ತದೆ. ದಾಖಲಾತಿ ಪ್ರಕ್ರಿಯೆಯ ಕೊನೆಯಲ್ಲಿ ಕೋರ್ಸುವಾರು, ಕಾಂಬಿನೇಷನ್‌ವಾರು ಒಟ್ಟು ದಾಖಲಾದ ಅಂಕಿ ಅಂಶಗಳನ್ನು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಜುಲೈ ಮೊದಲನೇ ವಾರದಲ್ಲಿ ಕಳುಹಿಸಿಕೊಡಬೇಕು.

4. ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ಸ್ವೀಕೃತಿ ಪತ್ರ ನೀಡಬೇಕು. ಪ್ರಥಮ ಪದವಿ ತರಗತಿಗಳಿಗೆ ಕಾಲೇಜಿನಲ್ಲಿ ಪ್ರವೇಶಕ್ಕೆ ಅರ್ಜಿಗಳನ್ನು ಹಾಕಿದ ಅರ್ಹ ವಿದ್ಯಾರ್ಥಿಗಳ ಪೂರ್ಣ ಪಟ್ಟಿಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1995 (ದಿ ಕರ್ನಾಟಕ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಕ್ಲಾಸಿಫಿಕೇಷನ್, ರೆಗ್ಯುಲೇಷನ್ ಮತ್ತು ಪ್ರಿಸ್ಕ್ರಿಪ್ಷನ್ ಆಫ್ ಕ್ಯಾರಿಕ್ಯುಲಾ ಎಕ್ಸಾಟ್ರಾ ನಿಯಮಗಳು 1995) ನಿಯಮ 14 (11)ರ ಪ್ರಕಾರ ಸಂಯೋಜನೆವಾರು ಪ್ರಕಟಿಸಬೇಕು. ಪದವಿ ತರಗತಿಗಳಿಗೆ ಸೇರಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿ ಹಾಕಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳ ತಿರಸ್ಕೃತ ಪಟ್ಟಿಯನ್ನು ಪ್ರಕಟಿಸಬೇಕು. ಈ ಎರಡು ಪಟ್ಟಿಗಳನ್ನು (ಅರ್ಹಪಟ್ಟಿ

ಮತ್ತು ತಿರಸ್ಕೃತ ಪಟ್ಟಿ) ಪ್ರಕಟಿಸಿದ ಮೇಲೆ ಇದರ ಬಗ್ಗೆ ಏನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಐದು ದಿವಸದೊಳಗೆ ಅರ್ಜಿಯನ್ನು ಹಾಕಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು.

ಪ್ರವೇಶಗಳನ್ನು ಹಂಚುವ ವಿಧಾನ:-

5.ಅ) ಸರ್ಕಾರಿ ಪದವಿ ಕಾಲೇಜಿನಲ್ಲಿ ಲಭ್ಯವಿರುವ ಎಲ್ಲ ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಹಂಚಿಕೆ ಮಾಡಬೇಕು.

ಆ) ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಲಭ್ಯವಿರುವ ಪ್ರವೇಶಗಳಲ್ಲಿ ನಿಯಮ 12(ಬಿ) ಪ್ರಕಾರ ಸಂಯೋಜನೆವಾರು ಶೇಕಡ 20 ಪ್ರವೇಶಗಳನ್ನು ಹಂಚಲು ಸಂಸ್ಥೆಯವರಿಗೆ ಬಿಡಲಾಗಿದೆ. ಆದರೆ ಸಾಧ್ಯವಾದಷ್ಟು ಮಟ್ಟಿಗೆ ರೋಸ್ಟರ್ ಪದ್ಧತಿಯಂತೆ ಪ್ರವೇಶ ನಿರ್ವಹಿಸತಕ್ಕದ್ದು.

ಇನ್ನುಳಿದ ಶೇಕಡ 80 ಪ್ರವೇಶಗಳನ್ನು ಸಂಯೋಜನೆವಾರ ಮೀಸಲಾತಿ ಪದ್ಧತಿಯಂತೆ ಮತ್ತು ಕೇವಲ ಮೆರಿಟ್ ಆಧಾರದ ಮೇಲೆ ಹಂಚಿಕೆ ಮಾಡಬೇಕು.

ಇ) ಅಲ್ಪಸಂಖ್ಯಾತ ಅನುದಾನಿತ ಸಂಸ್ಥೆಯವರು ನಡೆಸುತ್ತಿರುವ ಕಾಲೇಜುಗಳಲ್ಲಿ ಒಟ್ಟು ಲಭ್ಯವಿರುವ ಪ್ರವೇಶಗಳಲ್ಲಿ ಶೇಕಡ 50 ಪ್ರವೇಶಗಳನ್ನು ತಮ್ಮದೇ ಆದ ಜನಾಂಗದ (ಕಮ್ಯೂನಿಟಿ) ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲು ಸಂಸ್ಥೆಯವರಿಗೆ ಬಿಡಲಾಗಿದೆ. ಇನ್ನುಳಿದ 50 ಪ್ರವೇಶಗಳನ್ನು ನಿಯಮಾವಳಿ 14ರ ಉಪನಿಯಮಾವಳಿ 05 ಮತ್ತು 06ರಂತೆ ರೋಸ್ಟರ್ ಪದ್ಧತಿಯಂತೆ ಮೆರಿಟ್ ಮೇಲೆ ಪ್ರವೇಶಗಳನ್ನು ಹಂಚಬೇಕು. , ಹೀಗೆ ಪ್ರವೇಶಗಳನ್ನು ಕೊಟ್ಟ ಎರಡು ಪಟ್ಟಿಗಳನ್ನು ಪ್ರತ್ಯೇಕವಾಗಿ ಪ್ರಕಟಿಸಬೇಕು. ಖಾಸಗಿ ಅನುದಾನಿತ ಕಾಲೇಜುಗಳಿಗೆ ನಿಯಮ 12(ಬಿ) ಪ್ರಕಾರ ಲಭ್ಯವಿರುವ ಶೇಕಡ 20 (ಸಂಸ್ಥೆಯವರು ಮಾಡಬಹುದಾದ) ಪ್ರವೇಶವನ್ನು ನೀಡುವಾಗ ಸದರಿ ಪ್ರವೇಶದಲ್ಲಿಯೂ ಸಹ ಆದಷ್ಟು ಮಟ್ಟಿಗೆ ಅರ್ಧದಷ್ಟು ಪ್ರವೇಶ ಸೀಟುಗಳನ್ನು ತನ್ನದೇ ಆದ ಅಲ್ಪಸಂಖ್ಯಾತ ಪಂಗಡಕ್ಕೂ ಹಾಗೂ ಇನ್ನುಳಿದ ಅರ್ಧದಷ್ಟು ಪ್ರವೇಶ ಸೀಟುಗಳನ್ನು ಆದಷ್ಟು ಮಟ್ಟಿಗೆ ಸರ್ಕಾರ ನಿಗದಿ ಪಡಿಸಿರುವ ಮೀಸಲಾತಿ ಪದ್ಧತಿಯಂತೆ ಪ್ರವೇಶ ನೀಡುವ ವ್ಯವಸ್ಥೆ ಮಾಡತಕ್ಕದ್ದು.

ಮೇಲೆ ತಿಳಿಸಿರುವ Calendar of events ಮುಗಿದ ನಂತರವೂ ಕೂಡ ಕಾಲೇಜುಗಳಲ್ಲಿ ಪ್ರವೇಶ ಉಳಿದಿದ್ದ ಪಕ್ಷದಲ್ಲಿ ಆ ದಿನಾಂಕಗಳ ನಂತರವೂ ಕೂಡ ಅರ್ಜಿಯನ್ನು ಕೊಟ್ಟು ಪ್ರವೇಶಗಳನ್ನು ತುಂಬಲು ಅವಕಾಶ ಮಾಡಿಕೊಡಲಾಗಿದೆ. ವಿಶ್ವವಿದ್ಯಾನಿಲಯ ನಿರ್ಧರಿಸುವ ಪ್ರಥಮ ಪದವಿ ತರಗತಿಗಳಿಗೆ ದಾಖಲಾತಿಗೆ ಕೊನೆಯ ದಿನಾಂಕದೊಳಗೆ ದಾಖಲಾತಿ ಮಾಡಲು ಅನುಮತಿ ಇರುತ್ತದೆ.

ರೋಸ್ಟರ್ ಹಂಚಿಕೆ:-

1. ಸಹ ಶಿಕ್ಷಣ (Co-Education) ಸಂಸ್ಥೆಗಳಲ್ಲಿ ಪ್ರವೇಶಗಳಲ್ಲಿ ಶೇಕಡ 50 ಪ್ರವೇಶಗಳು ನಿಯಮ 14 (6)ರ ಪ್ರಕಾರ ವಿದ್ಯಾರ್ಥಿನಿಯರಿಗೆ ಮೀಸಲಿಡಬೇಕು. ಈ ವಿದ್ಯಾರ್ಥಿನಿಯರಲ್ಲಿ ಮತ್ತೆ ರೋಸ್ಟರ್ ಪದ್ಧತಿ ಅನುಸರಿಸಬೇಕು. ಶೇಕಡ 50 ವಿದ್ಯಾರ್ಥಿನಿಯರು ಅರ್ಜಿಗಳನ್ನು ಹಾಕದಿದ್ದ ಪಕ್ಷದಲ್ಲಿ ಆ ಪ್ರವೇಶಗಳನ್ನು ವಿದ್ಯಾರ್ಥಿಗಳಿಗೆ (ಬಾಲಕರಿಗೆ) ರೋಸ್ಟರ್ ಅನುಗುಣವಾಗಿ ಕೊಡಬಹುದು.

2. ಲಭ್ಯವಿರುವ ಒಟ್ಟು ಪ್ರವೇಶಗಳಲ್ಲಿ ಶೇಕಡ 05 ಪ್ರವೇಶಗಳನ್ನು ಅಂಗವಿಕಲ ಅಧಿನಿಯಮ 1995ರ ಪರಿಚ್ಛೇದ 39ರ ಪ್ರಕಾರ ಅಂಗವಿಕಲರಿಗೆ ಮೀಸಲಿಡಬೇಕು.

3. ಸರ್ಕಾರ ನಿಗಧಿಪಡಿಸಿರುವಂತೆ ಹಾಗೂ ಕಾಲ ಕಾಲಕ್ಕೆ ನಿಗಧಿಪಡಿಸುವಂತೆ ನಿಯಮ 14(5)ರ ಪ್ರಕಾರ ಪರಿಶಿಷ್ಟ ಜಾ ತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗಗಳು/ ವರ್ಗ-1, 2ಎ, 2ಬಿ , 3ಎ, 3ಬಿ , ವಿದ್ಯಾರ್ಥಿಗಳಿಗೆ ಪ್ರವೇಶಗಳನ್ನು ಮೀಸಲಾಗಿಡುವುದು.

4. ವಿವಿಧ ವರ್ಗಗಳಲ್ಲಿ ಸಂಬಂಧಿಸಿದ ವಿದ್ಯಾರ್ಥಿಗಳು ಅರ್ಜಿಯನ್ನು ಹಾಕದಿದ್ದಲ್ಲಿ ಅಂತಹ ಪ್ರವೇಶಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾಯಿಸುವುದು. ಯಾವುದೇ ಕಾರಣಕ್ಕೆ ಮೀಸಲಾತಿ ವರ್ಗದವರಿಂದ ಬಂದಿರುವ ಅರ್ಜಿಗಳನ್ನು exhaust ಮಾಡದೆ ಸಾಮಾನ್ಯ ವರ್ಗಕ್ಕೆ ವರ್ಗಾಯಿಸಕೊಡದು.

ಮೆರಿಟ್ ಆಧಾರದ ಪ್ರವೇಶ ಪಟ್ಟಿ ತಯಾರಿಕೆ:-

ಮೊಟ್ಟಮೊದಲು ಮೀಸಲಾತಿಗೆ ಒಳಪಟ್ಟಿರುವ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಪ್ರವೇಶಗಳನ್ನು ಮೆರಿಟ್ ಆಧಾರದ ಮೇಲೆ ಪ್ರವೇಶಗಳನ್ನು ತುಂಬಬೇಕು. ನಂತರ ಈ ಮೇಲೆ ತಿಳಿಸಿರುವ ಮೀಸಲಾತಿ ಪದ್ಧತಿಯ ಆಧಾರದ ಮೇಲೆ ಲಭ್ಯವಿರುವ ಪ್ರವೇಶಗಳಲ್ಲಿ ಯಾವ ಯಾವ ಗುಂಪಿಗೆ ಎಷ್ಟು ಪ್ರವೇಶಗಳನ್ನು ಹಂಚಬೇಕು ಎಂದು ನಿರ್ಧರಿಸಿದ ನಂತರ ಆಯಾ ಪಂಗಡಗಳ ವಿದ್ಯಾರ್ಥಿಗಳ ಅರ್ಜಿಯನ್ನು ಇದೇ ಆಧಾರದ ಮೇಲೆ ಜೋಡಿಸಿಕೊಂಡು ಅವರಲ್ಲಿ ಮೆರಿಟ್ ಆಧಾರದ ಮೇಲೆ ಜೋಡಿಸಿಕೊಂಡು ಅವರಲ್ಲಿ ಮೆರಿಟ್ ಆಧಾರದ ಮೇಲೆ (ವಿದ್ಯಾರ್ಥಿಗಳು ಪಿಯುಸಿ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ಪ್ರವೇಶಗಳನ್ನು) ಹಂಚಬೇಕು. ಕಾಲೇಜಿನವರು ಪ್ರಥಮ ಪಟ್ಟಿ ದ್ವಿತೀಯ ಪಟ್ಟಿ ತೃತೀಯ ಪಟ್ಟಿ ಮತ್ತು ಅವಶ್ಯ ಬಿದ್ದಲ್ಲಿ ಹೆಚ್ಚುವರಿ ಪಟ್ಟಿಗಳನ್ನು ಉಪನಿಯಮ 11 ಮತ್ತು 12ಎ ಪ್ರಕಾರ ಪ್ರಕಟಿಸಬೇಕು. ಪಟ್ಟಿಗಳನ್ನು ಪ್ರಕಟಿಸುವ ದಿನಾಂಕಗಳು ಕೆಳಕಂಡ ಅವಧಿಗಳನ್ನು ಹೊಂದಿರಬೇಕು.[1]

ಆಯ್ಕೆಯಾದ ವಿದ್ಯಾರ್ಥಿಗಳ ಪ್ರಥಮ ಪಟ್ಟಿಯನ್ನು ಉಪನಿಯಮ 12ಎ ಪ್ರಕಾರ ಪ್ರಕಟಿಸಿದ ನಂತರ ಆ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಕಟ್ಟಲು ಮೂರು ದಿವಸಗಳ ಸಮಯ ಕೊಡಬೇಕು. ಆ ದಿವಸದ ನಂತರ ಪ್ರಕಟಿಸಿದ ಪ್ರಥಮ

ಪಟ್ಟಿಯಲ್ಲಿ ಎಷ್ಟು ವಿದ್ಯಾರ್ಥಿಗಳು ಶುಲ್ಕ ಕಟ್ಟಿದ್ದಾರೆ ಎಂಬುದನ್ನು ಖಾತರಿಪಡಿಸಿಕೊಂಡು ಇನ್ನುಳಿದ ಪ್ರವೇಶಗಳಿಗೆ ದ್ವಿತೀಯ ಪಟ್ಟಿಯನ್ನು ಪ್ರಥಮ ಪಟ್ಟಿ ಪ್ರಕಟಿಸಿದ ಐದನೇ ದಿವಸ ಪ್ರಕಟಿಸಬೇಕು. ಈ ದ್ವಿತೀಯ ಆಯ್ಕೆಗೊಂಡ ಪಟ್ಟಿಯ ವಿದಾರ್ಥಿಗಳಿಗೂ ಸಹ ಶುಲ್ಕ ಕಟ್ಟಲು ಮೂರು ದಿವಸ ಸಮಯ ಕೊಡಬೇಕು. ದ್ವಿತೀಯ ಪಟ್ಟಿ ಪ್ರಕಟಿಸಿದ ಐದು ದಿವಸಗಳ ನಂತರ ತೃತೀಯ ಆಯ್ಕೆಗೊಂಡ ಪಟ್ಟಿಯನ್ನು ಪ್ರಕಟಿಸಬೇಕು. ಅವರಿಗೂ ಸಹ ಶುಲ್ಕ ಕಟ್ಟಲು ಮೂರು ದಿವಸ ಸಮಯ ಕೊಡಬೇಕು. ಆವಶ್ಯಕತೆ ಬಿದ್ದಲ್ಲಿ ಕೊನೆಯದಾಗಿ ಆಯ್ಕೆಗೊಂಡ ಹೆಚ್ಚುವರಿ ಪಟ್ಟಿಯನ್ನು ತೃತೀಯ ಪಟ್ಟಿ ಪ್ರಕಟಿಸಿದ ಐದು ದಿವಸಗಳ ನಂತರ ಪ್ರಕಟಿಸಬೇಕು. ಯಾವುದೇ ಕಾರಣಕ್ಕೆ ಆಯ್ಕೆಗೊಂಡ ನಾಲ್ಕು ಪಟ್ಟಿಗಳಲ್ಲಿ ಇಲ್ಲದ ಹೆಸರುಗಳನ್ನು ಪ್ರಥಮ ಪದವಿ ತರಗತಿಗೆ ದಾಖಲಾತಿ ಮಾಡಿಕೊಳ್ಳಕೂಡದು. ಸಂಸ್ಥೆಯವರಿಗೆ ಬಿಡಲಾದ ಪ್ರವೇಶಗಳಲ್ಲಿ ಸಹ ವಿದ್ಯಾರ್ಥಿಗಳ ಪಟ್ಟಿಯನ್ನು ಹಾಕುವುದು.

ಪ್ರತಿ ಆಯ್ಕೆಗೊಂಡ ಪಟ್ಟಿಯಲ್ಲಿ ವಿದ್ಯಾರ್ಥಿಗಳು ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ಮತ್ತು ಶೇಕಡವಾರು ಅಂಕಗಳನ್ನು ನಮೂದಿಸಬೇಕು. ಯಾವುದೇ ಕಾರಣಕ್ಕೆ ಕೆಲವು ವಿಷಯಗಳ ಅಂಕಗಳನ್ನು ಮಾತ್ರ ಪರಿಗಣನೆ ಮಾಡಬಾರದು. ಪ್ರತಿ ಪಟ್ಟಿಯನ್ನು ಪ್ರಕಟಿಸಿದಾಗ ವಿವಿಧ ವರ್ಗಗಳಲ್ಲಿ ಸಂಯೋಜನೆವಾರು ಕೊನೆಯ ಪ್ರವೇಶವನ್ನು ಪಡೆದ ವಿದ್ಯಾರ್ಥಿಯ ಒಟ್ಟು ಅಂಕಗಳನ್ನು ಮತ್ತು ಶೇಕಡವಾರು ಅಂಕಗಳನ್ನು ( Cut of point ) ಸೂಚನಾ ಫಲಕದ ಮೇಲೆ ಪ್ರಕಟಿಸಬೇಕು.

ಪ್ರಕಟಿಸಿದ ಆಯ್ಕೆಗೊಂಡ ಪಟ್ಟಿಗಳು ಮತ್ತು ದಾಖಲಾದ ವಿದ್ಯಾರ್ಥಿಗಳ ಪಟ್ಟಿಗಳನ್ನು ಪ್ರವೇಶ ಪ್ರಕ್ರಿಯೆ ಮುಗಿದ ನಂತರ ದೃಢೀಕರಿಸಿ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಕಳುಹಿಸಿಕೊಡಬೇಕು.

ಕಾಲೇಜಿನವರು ತೆಗೆದುಕೊಳ್ಳುವ ಶುಲ್ಕವನ್ನು ಸೂಚನಾ ಫಲಕದ ಮೇಲೆ ಕಡ್ಡಾಯವಾಗಿ ಪ್ರಕಟಿಸಬೇಕು. ತೆಗೆದುಕೊಳ್ಳುವ ಶುಲ್ಕಕ್ಕೆ ರಸೀದಿ ಕೊಡಬೇಕು.

(ಕರಡು ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು.

ಪ್ರತಿ-

1. ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಪದವಿ ಶಿಕ್ಷಣವನ್ನು ಬೋಧಿಸುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ.
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
5. ಹೆಚ್ಚುವರಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
6. ಜಂಟಿ ನಿರ್ದೇಶಕರು (ಶೈಕ್ಷಣಿಕ ವಿಭಾಗ) ಕಾಲೇಜು ಶಿಕ್ಷಣ ಇಲಾಖೆ, ಆಪ್ತ ಶಾಖೆಗೆ.
7. ಕಛೇರಿ ಪ್ರತಿ

**CO-ORDINATOR**
**IQAC**
SJM College of Arts, Scince & Commerce
Chandravalli, Chitradurga.

**PRINCIPAL**
Sri Jagadguru Murugharajendra College
of Arts, Science & Commerce
CHITRADURGA

**True Translated Copy**

Government of Karnataka

No. DCE: 209: ACM: Admission:2002-03

Office of Commissioner

Bangalore-1, Dt: 09-01-2003

S.J.M. COLLEGE CHITRADURGA

# Circular

Reg: Bringing more transparency in the First year UG admissions in the UG colleges of Karnataka State .

The following guidelines have been prepared in accordance with the Karnataka Education Act and Supreme Court judgment, to bring more transparency in the admission of students to first year undergraduate course. The government and private aided and private aided minority institutions have been hereby instructed to mandatorily follow this guidelines while admitting students to the first year degree courses ,from the academic year 2003 -04.

1. The total number of seats available/sanctioned for the first year degree courses in your college ,must be announced on the notice board/website before the admission process begins. This total number should be announced according to the roster system , programme wise as sanctioned by the affiliation committee. . In each programme, the existing number of sections should be announced .All these sections/ combinations must have been sanctioned by the affiliation committee. Admitted number of students must be as allocated and approved by the University .

A model of information that can be announce on the notice board is given below.

Example:

Total number of seats /admissions in the college : 600

Stream/programme wise available seats : Science stream : 200

: Commerce stream : 100

: Humanities stream: 300

| Stream wise available admissions | Percentage- % | BSC | BCOM | BA |
|---|---|---|---|---|
| Admissions allowed as per management's discretion : | 20 | 40 | 20 | 60 |
| Seats distributed according to the merit list. | 80 | 160 | 80 | 240 |

| | Reservation Quota | Total number of available seats for admission | | |
|---|---|---|---|---|
| | Percentage | B.Sc. | B.Com | BA |
| | 100% | 200 | 100 | 300 |
| Categories | | | | |
| General | 50 | 100 | 50 | 150 |
| SC | 15 | 30 | 15 | 45 |
| ST | 03 | 06 | 03 | 09 |
| Cat-1 | 04 | 08 | 04 | 12 |
| 2A | 15 | 30 | 15 | 45 |
| 2B | 04 | 08 | 04 | 12 |
| 3A | 04 | 08 | 04 | 12 |
| 3B | 05 | 10 | 05 | 15 |

1. The Programmes taught in the college and each course/paper in that programme should be in the programme/ courses list sanctioned by the University . Without prior permission from the government , any new subject or combination should not be introduced and students should not be admitted to such courses. Without the prior written permission from the Collegiate Department, any Programme/course wise classes should not be started , with the intention of creating/ distributing workload to additional faculty.
2. The process of admission to first year must follow the University academic calendar. Complete Calendar of events for admission process must be mandatorily announced prominently on the college notice board/ important place ,so as to be noticed by the parents and students.

-----------------

1. Admission application forms(with serial number) should be made available for a minimum of 5 days from the announcement of PU results. Every day, the forms should be made available to the students at least for 4 hours. The time of distribution of forms should be announced on the notice board , prior to the commencement of admission. If need be, more counters should be opened so that students can receive applications without any hassles.
2. After the last date for distribution of application forms is over, a minimum of 3 days should be given to the students to fill up and submit the same. Separate counters should be opened to receive the applications from the students. Filled up applications can be received from the students , from the day after the beginning of distribution of applications.
3. Account should be maintained , about the number of applications distributed each day. If the students' info is digitalized at the time of distribution itself, it will save time later when additional info has to be added for each student. After the completion of admission documentation, total statistics regarding admission of students course wise, combination wise , should be dispatched to the Office of the Regional Joint Director, in the first week of July.

4. Students should be given acknowledgement for submitting their application. The complete list of eligible students who have applied to the admission for first year should be announced combination/course wise, as per the Karnataka Education Act 1995 ( vide The Karnataka Educational Institutions Classification, revelation and Prescription of Curricula –Extra Rules 1995) Rule-14(11). The list of ineligible students whose applications are rejected should also be announced . After these 2 lists are announced, 5 days' time should be given to the students to submit their objections to the said lists.

## The method of distribution of admissions :

5.A) All the seats available in the Government colleges should be distributed based on merit and Roster system .

b) In private aided colleges, 20 % of the available seats can be distributed as per the discretion of the institution , according to 12 (b) regulations.

The remaining 80% seats must be distributed as per the reservation rules and based on merit only.

c) In minority institutions, 50% of total seats can be filled up with students from the same community .The remaining 50% must be distributed as per reservation policy and merit , vide rule number 14, sub section/rule number 05 and 06. Thus , two separate lists should be announced . Even in private aided colleges, according to 12 (B) rules the 20 % seats allocated to the discretion of the institution , can be equally divided between the students of the same minority community and the students of reserved category, as per Govt reservation policy.

If seats are available even after the closing of calendar of events as mentioned above, applications can be given to the students and those seats can be filled up. Permission is granted to give admission to the students to the first year degree till the last date of admission as announced by the University.

**Roster Distribution:**

1. In Co-education Institutions , 50% seats should be reserved for girl students as per admission rule number 14 (6) . Roster system should be followed in these seats for girls too. If 50 % girls have not applied , then those seats can be distributed among boys as per roster system.
2. 5% seats should be reserved for Physically handicapped students vide 1995 Act ,Section 39.
3. Admissions should be reserved for students belonging to SC/ST/OBC/Cat-1, 2A, 2B, 3A, 3B, as per Rules 14 (5) as fixed by the government from time to time.
4. If students of various categories have not applied , such seats can be transferred to the general category. The seats reserved for categories must

not be transferred to the general category , without first exhausting all applications received by students of those categories.

**Preparing the merit list of students for admission.**

Admissions must be made as per the merit list which should include the reserve categories' students . Then, based on the reservation system explained above, the number of admissions to be made under different categories should be first decided . Then , the applications of students belonging to each category should be arranged ed as per merit,(marks obtained in 2nd PUC or equivalent examination). The college administration can announce first list, second list, third list or further additional list if need arises (as per sub rules 11 and 12 A). The dates for announcing the lists must be as given below:

After the first list of eligible students is announced as per sub rule 12A , those students should be given 3 days ' time to pay the admn fees . After confirming the number students of first list who have paid the fees, the second list for remaining admissions should be announce on the 5th day after the first list is announced . 3 days' time should be given these students of 2nd list also. Third list should be announced 5 days after the 2nd list is announced. They too should be given 3 days' time to pay the fees.

If necessary, the last additional list can be announced 5 days after the 3rd list is announced .The students ' names which are not in the first 4 lists should not be admitted to the first year degree. Even in the seats left to the discretion of the management, students' list must be announced.

In each list of selected students., the total marks obtained by the student in PUC or equivalent exam and percentage of marks should be entered . The marks obtained in only a few subjects should not be taken into consideration for any reason. When each list is announced , the total marks and percentage of marks of last student (cut off point) who got seat in that category , course wise , should be announced on the notice board .

After the admission process is over, the selected students' lists and admitted students' final lists should be certified and sent to the office of the Regional Joint Director.

The fees collected by the college must be mandatorily announced on the noticed board . Receipt must be issued to the students for the same.

(Draft is approved

By the Commissioner)

-sd-

Additional Director

Collegiate Education

Copies to :

1. Secy., Higher Education Dept, MS building ,Bangalore.
2. Principals of all undergraduate colleges (govt and private aided )
3. All Regional Joint Directors of Collegiate Dept.
4. Director, DCE, Personal section.
5. Additional Director, DCE, personal section
6. Joint Director, (academic section) , DCE, Personal section
7. Office copy.

CO-ORDINATOR
IQAC
SJM College of Arts, Scince & Commerce
Chandravalli, Chitradurga.

S.J.M. COLLEGE
CHITRADURGA
Chandaravalli

PRINCIPAL
Sri Jagadguru Murugharajendra College
of Arts, Science & Commerce
CHITRADURGA